**26**

# "ನಾವು ಮನುಷ್ಯರನ್ನು ಒಡಂಬಡಿಸುತ್ತೇವೆ"

2 ಕೊರಿಂಥ 5:11ಎ ದಲ್ಲಿ "ಅದುದರಿಂದ ಕರ್ತನ ಭಯವು ನಮಗಿರುವದರಿಂದ ನಾವು ಮನುಷ್ಯರನ್ನು ಒಡಂಬಡಿಸುತ್ತೇವೆ" ಎಂದು ಪೌಲನು ಹೇಳಿದ್ದಾನೆ. ಇದು ಅನೇಕ ಬೆಲೆಯುಳ್ಳ ಪಾಠಗಳನ್ನು ಒಳಗೊಂಡಿರುವದರಿಂದ, ಈ ಚಿಕ್ಕ ಹೇಳಿಕೆಯನ್ನು ನಾವು ಪರೀಕ್ಷಿಸೋಣ.

## "*ನಾವು* ಮನುಷ್ಯರನ್ನು ಒಡಂಬಡಿಸುತ್ತೇವೆ"

ಸುವಾರ್ತೆಯ ನಿಧಿಯು ಮಣ್ಣಿನ ಘಟಗಳಲ್ಲಿವೆ (2 ಕೊರಿಂಥ 4:7). ಜಗತ್ತಿಗೆ ಸುವಾರ್ತೆಯನ್ನು ವಿತರಿಸುವ ಸೌಕರ್ಯವು ದೇವದೂತರಿಗೆ ಕೊಡಲ್ಪಟ್ಟಿರುವದಿಲ್ಲ. ಆ ಗೌರವವು ಹಾಗೂ ಜವಾಬ್ದಾರಿಕೆಯು ಮನುಷ್ಯರಿಗೆ ಕೊಡಲ್ಪಟ್ಟಿದೆ.

ವಾಕ್ಯದ ಪ್ರಸಂಗಿಸುವಿಕೆಯ ಮುಖಾಂತರವಾಗಿ ಜನರು ರಕ್ಷಿಸಲ್ಪಟ್ಟಿದ್ದಾರೆ (1 ಕೊರಿಂಥ 1:21). ಈ ಅರ್ಥದಲ್ಲಿ ಜನರು ಇತರ ಜನರನ್ನು ರಕ್ಷಿಸುವರು (ಯಾಕೋಬ 5:20). ನಿಶ್ಚಿಯವಾಗಿಯೂ ಹೊಸ ಒಡಂಬಡಿಕೆಯ ಬರಹಗಾರರು ರಕ್ಷಿಸುವ ಸರಪಣಿಯಲ್ಲಿ ಮಾನವ ಸಾಧನವನ್ನು ಮಹತ್ವದ ಕೊಂಡಿಯನ್ನಾಗಿ ಯೋಚಿಸುವರು.

ಕೆಲವು ಸಲ ಜನರು ಪಾಪಗಳ ಕ್ಷಮಾಪಣೆಗಾಗಿ ಬಾಪ್ತಿಸ್ಮದ ಬೋಧನೆಯನ್ನು ಆಕ್ಷೇಪಿಸುತ್ತಾರೆ. ಯಾಕಂದರೆ ಅದು ರಕ್ಷಣೆಯನ್ನು ಭಾಗಶಃವಾಗಿ ತೃತೀಯ ಪಕ್ಷದ ಮೇಲೆ ಅಂದರೆ ಮಾನವ ಜೀವಿಯ ಮೇಲೆ ಅವಲಂಭಿಸುವಂತೆ ಮಾಡುತ್ತದೆ. ವಿಶ್ವಾಸದ ತತ್ವವು ಇದನ್ನೇ ಮಾಡುತ್ತದೆ ಯಾಕಂದರೆ ಇದು ಒಂದಿಲ್ಲಾ ಒಂದು ರೀತಿಯಲ್ಲಿ ಪ್ರತಿಯೊಬ್ಬ ವ್ಯಕ್ತಿಗೆ ಪ್ರಸಂಗಿಸಲ್ಪಡಬೇಕು. ಇಲ್ಲವೇ ಬೋಧಿಸಲ್ಪಡಬೇಕು (ನೋಡಿರಿ. ರೋಮಾಪುರ 10:13, 14). ಆದುದರಿಂದ ಈ ಆಕ್ಷೇಪಣೆಯು ವಿಶ್ವಾಸವನ್ನು ಹಾಗೆಯೇ ಬಾಪ್ತಿಸ್ಮವನ್ನು ತೆಗೆದು ಹಾಕುತ್ತದೆ.

## "ನಾವು ಮನುಷ್ಯರನ್ನು *ಒಡಂಬಡಿಸುತ್ತೇವೆ*"

ಜನರನ್ನು ಕ್ರೈಸ್ತರಾಗಲು ನಾವು ಒತ್ತಾಯ ಮಾಡುವದಿಲ್ಲ. ನಾವು ಅವರನ್ನು ಹೆದರಿಸುವದಿಲ್ಲ. ಅದರ ಬದಲು ನಾವು ಅವರನ್ನು ಪ್ರೇರೇಪಿಸುತ್ತೇವೆ. ದೇವರು ಭೌತಿಕ ವಿಶ್ವವನ್ನು ಬಲದಿಂದ ಆಳುತ್ತಾನೆ, ಆದರೆ ಅದೇ ರೀತಿಯಲ್ಲಿ ಆತನು ಜನರ ಮೇಲೆ

ಆಳಿಕೆ ಮಾಡುವದಿಲ್ಲ. ಅದರ ಬದಲು ಮನುಷ್ಯನ ಹೃದಯದ ಬಾಗಿಲ ಬಳಿಯಲ್ಲಿ ಆತನು ನಿಂತುಕೊಂಡು, ಪ್ರವೇಶಿಸಲು ಒಂದು ಆಹ್ವಾನವನ್ನು ಅಪೇಕ್ಷಿಸಿ ತಟ್ಟುತ್ತಾನೆ (ಪ್ರಕಟನೆ 3:20).

ಕ್ರಿಸ್ತನ ಬಳಿಗೆ ಜನರನ್ನು ತರುವ ಕೇವಲ ವಿಧಾನವು ಬೋಧಿಸುವುದಾಗಿದೆ. ಬೋಧಿ ಸುವದರಿಂದ ಅವರನ್ನು ಗೆದ್ದುಕೊಳ್ಳುವದಾಗದಿದ್ದರೆ, ಆಗ ಅವರನ್ನು ಗೆದ್ದುಕೊಳ್ಳುವುದು ಅಸಾಧ್ಯವಾಗುತ್ತದೆ. ಸ್ವೀಕರಿಸಲು ಮನುಷ್ಯನಿಗೆ ಬಲವಿದೆ ಎಂಬ ಸೂತ್ರದ ಮೇಲೆ ದೇವರು ಮನುಷ್ಯನೊಂದಿಗೆ ವ್ಯವಹರಿಸುತ್ತಾನೆಂದು ಯೋಹಾನ 6:44, 45 ತೋರಿಸುತ್ತದೆ. “ನನ್ನನ್ನು ಕಳುಹಿಸಿದ ತಂದೆಯು ಆಕರ್ಷಿಸದಿದ್ದರೆ ಯಾರೂ ನನ್ನ ಬಳಿಗೆ ಬರುವದಿಲ್ಲ; ... ಹೌದು ಅವರೆಲ್ಲರಿಗೂ ದೇವರು ಬೋಧಿಸಲ್ಪಡುವನು” ಎಂದು ಪ್ರವಾದಿಗಳಲ್ಲಿ ಬರೆಯಲ್ಪಟ್ಟಿದೆ. ತಂದೆಯಿಂದ ಕೇಳಲ್ಪಟ್ಟ ಮತ್ತು ಕಲಿತುಕೊಂಡ ಪ್ರತಿಯೊಬ್ಬನೂ ನನ್ನ ಬಳಿಗೆ ಬರುವನು.

## “ನಾವು *ಮನುಷ್ಯರನ್ನು* ಒಡಂಬಡಿಸುತ್ತೇವೆ”

ದೇವರ ಒಡಂಬಡಿಸುವ ಸಂದೇಶವು ಮನುಷ್ಯರ ಕಡೆಗೆ ಕೊಡಲ್ಪಟ್ಟಿದೆ. ... ಕಲ್ಲುಗಳಿಗೆ, ಬಂಡೆಗಳಿಗೆ, ಸಾಗರಗಳಿಗೆ ಇಲ್ಲವೇ ಗ್ರಹಗಳಿಗೆ ಅಲ್ಲ. ದೇವರು ಮನುಷ್ಯರನ್ನು ಗಮನಿಸುತ್ತಾನೆ. ಪ್ರಕಾಶಿಸುವ ಎಲ್ಲಾ ನಕ್ಷತ್ರಗಳಿಗಿಂಥ ಹೆಚ್ಚಾಗಿ ಮನುಷ್ಯನಲ್ಲಿ ಆತನು ತನ್ನ ಆಸಕ್ತಿಯನ್ನು ತೋರಿಸಿದ್ದಾನೆ.

ರಕ್ಷಣೆಯು ದೇವರನ್ನು ಒಡಂಬಡಿಸುವ ಸಂಗತಿಯಲ್ಲ. “ಧರ್ಮವನ್ನು ಪಡೆದು ಕೊಳ್ಳಲು” ದುಃಖಿಸುವವರ ಬೆಂಚ್ ಪದ್ಧತಿಯು ದೇವರನ್ನು ಬೇಡಿಕೊಳ್ಳುತ್ತದೆ. ನಮ್ಮನ್ನು ರಕ್ಷಿಸಲು  ನಾವು ದೇವರನ್ನು ಒಡಂಬಡಿಸುವ ಅಗತ್ಯತೆಯಿಲ್ಲ, ಆತನು ಸಿದ್ಧನಾಗಿದ್ದಾನೆ ಮತ್ತು ಆಸಕ್ತನಾಗಿದ್ದಾನೆ. ಆತನು ನಮ್ಮನ್ನು ಆಹ್ವಾನಿಸುತ್ತಾನೆ. ದೇವರಿಗೂ ಮಾನವನಿಗೂ ಮಧ್ಯದಲ್ಲಿಯ ದೊಡ್ಡ ಬಿರುಕು ಮಾನವರಿಂದ ಮಾಡಲ್ಪಟ್ಟಿದೆಯೆಂಬುದನ್ನು ಜ್ಞಾಪಿಸಿಕೊಳ್ಳೋಣ. ದೇವರಲ್ಲ, ಆದರೆ ಮನುಷ್ಯರು ಹಿಂದಿರುಗುವ ಕಾರ್ಯವನ್ನು ಮಾಡಬೇಕು. “ದೇವರೊಂದಿಗೆ ಸಂಧಾನವಾಗಿರಿ” (2 ಕೊರಿಂಥ 5:20); ದೇವರನ್ನು ಮನುಷ್ಯನಿಗೆ ಸಂಧಾನ ಮಾಡುವ ವಿಷಯ ಅದಾಗಿರುವದಿಲ್ಲ.

ಮನುಷ್ಯರು ಏನಾಗಿರಬೇಕೆಂದು ಪೌಲನು ಒಡಂಬಡಿಸಿದನು? “ಅಲ್ಪ ಪ್ರಯತ್ನದಿಂದ ನನ್ನನ್ನು ಕ್ರೈಸ್ತನಾಗುವದಕ್ಕೆ ಒಡಂಬಡಿಸುತ್ತೀಯಾ?” (ಅಪೊಸ್ತಲರ ಕೃತ್ಯ 26:28) ಎಂದು  ಒಬ್ಬ ಮನುಷ್ಯನು ಹೇಳಿದನು, “-ites” ಇಲ್ಲವೇ “-ists” ಇವುಗಳ ಯಾವುದೇ ರೀತಿಗೆ ಪೌಲನು ಜನರನ್ನು ಒಡಂಬಡಿಸಲಿಲ್ಲ: ಯಾವುದೇ ಧಾರ್ಮಿಕ ಪಂಗಡಕ್ಕೆ ಸೇರಬೇಕೆಂದು ಅವನು ಜನರನ್ನು ಒಡಂಬಡಿಸಲಿಲ್ಲ. ಕ್ರೈಸ್ತರಾಗಿರಲು ಅವನು ಅವರನ್ನು ಒಡಂಬಡಿಸಿದನು. ಕ್ರೈಸ್ತರಾಗಿರಬೇಕೆಂದು - ಕ್ರೈಸ್ತರು ಮಾತ್ರವೇ ಆಗಿರಬೇಕೆಂದು ಅವನು ಜನರನ್ನು ಒಡಂಬಡಿಸಿದನು.

## “ಕರ್ತನ ಭಯ”

“ಕರ್ತನ ಭಯವನ್ನು” ತಿಳಿದುಕೊಂಡದ್ದರಿಂದ ತಾನು ಜನರನ್ನು ಒಡಂಬಡಿಸುತ್ತಿದ್ದೇನೆಂದು ಪೌಲನು ಹೇಳಿದ್ದಾನೆ (“ಕರ್ತನ ಭಯಾನಕತೆ”; KJV).

ದೇವರ ಈ ಗುಣಲಕ್ಷಣಗಳನ್ನು ಜನರು ಕೆಲವು ಸಲ ಕಡೆಗೆಣಿಸುತ್ತಾರೆ. ದೇವರು ಒಳ್ಳೆಯವನೂ ಕಠಿಣನೂ ಎರಡೂ ಆಗಿರುತ್ತಾನೆ (ರೋಮಾಪುರ 11:22). ಆತನು ಇಷ್ಟಪಡುವಾಗ ಯಾವಾಗಲೂ ಕರುಣೆಯುಳ್ಳವನಾಗಿರುವನು. ಆದರೆ ಆತನು ಆಗಿರಲೇ ಬೇಕಾಗಿದ್ದಾಗ ಕಠಿಣನೂ ಆಗಿರುವನು.

ವೈಯಕ್ತಿಕ ದೇವರ ವಿರುದ್ಧವಾಗಿ ದಂಗೆಯೆದ್ದು ಸೃಷ್ಟಿಯೇ ತಮ್ಮ ದೇವರು ಎಂದು ಹೇಳುವ ಜನರಿದ್ದಾರೆ. ಕಠಿಣತೆಯನ್ನು ಕೆಲವು ಸಲ ಪ್ರಕಟಿಸುವ ವೈಯಕ್ತಿಕ ದೇವರ ಭಾವನೆಯನ್ನು ಅವರು ಇಷ್ಟಪಡುವದಿಲ್ಲ. ನೈಸರ್ಗಿಕ ಜಗತ್ತಿನ ಮೃದುವಾದ ಗುಣಲಕ್ಷಣಗ ಳೊಂದಿಗೆ ನಿಸರ್ಗದ ಒತ್ತಡಗಳಿಗೆ ಭಯಾನಕವಾದ ಭಾಗವಿದೆಯೆಂಬುದನ್ನು ಅವರು ನಿಂತುಕೊಂಡು ಯೋಚಿಸುವದಿಲ್ಲ.

ದೇವರ ಒಳ್ಳೆಯತನವೂ ಕೋಪವೂ ಹಳೇ ಒಡಂಬಡಿಕೆಯಲ್ಲೆಲ್ಲಾ ಕಂಡುಬರುತ್ತದೆ. ಏದೆನ್ ತೋಟವು ದೇವರ ಒಳ್ಳೆಯತನವನ್ನು ಪ್ರದರ್ಶಿಸುತ್ತದೆ. ಆದರೆ ಮನುಷ್ಯನನ್ನು ತೋಟದಿಂದ ಹೊರಗೆ ಹಾಕಿದ್ದು ದೇವರ ಕಠಿಣತೆಯನ್ನು ಪ್ರಕಟಿಸುತ್ತದೆ. ಅನೇಕ ವರ್ಷಗಳ ವರೆಗೆ ದೇವರು ಮಾನವನೊಂದಿಗೆ ತಾಳ್ಮೆಯುಳ್ಳವನೂ ದೀರ್ಘಶಾಂತನೂ ಆಗಿದ್ದನು. ಆದರೆ ಹಳೇ ಒಡಂಬಡಿಕೆಯಲ್ಲಿ ಮಾನವ ಚರಿತ್ರೆಯು ಜಲ ಪ್ರಳಯ ದೊಂದಿಗೆ, ಸೋದೋಮ ಗಮೋರಗಳ ನಾಶಪಡಿಸುವಿಕೆಯೊಂದಿಗೆ, ಐಗುಪ್ತದ ಸೈನ್ಯದ ನಾಶಪಡಿಸುವಿಕೆಯೊಂದಿಗೆ ಮತ್ತು ಅಂಥ ಇತರ ಘಟನೆಗಳೊಂದಿಗೆ ತುಂಬಿಕೊಂಡಿರುತ್ತದೆ.

ಕರ್ತನ ಭಯ ಎಂದು ಹೇಳಿದ್ದರಲ್ಲಿ ಪೌಲನ ಮನಸ್ಸಿನಲ್ಲಿ ನ್ಯಾಯತೀರ್ವಿಕೆಯ ದಿನದಲ್ಲಿ ಪ್ರಕಟಿಸಲ್ಪಡುವ ರೋಷವು ಇರಬಹುದೆಂದು ತೋರುತ್ತದೆ. ಬರಲಿಕ್ಕಿದ್ದ ನ್ಯಾಯ ತೀರ್ವಿಕೆಯ ಬಗ್ಗೆ ಪೌಲನು ಫೇಲಿಕ್ಸನಿಗೆ ಪ್ರಸಂಗಿಸಿದನು. ಫೇಲಿಕ್ಸನು "ಭಯಗೊಂಡನು" ("ನಡುಗಿದನು," KJV; ಅಪೊಸ್ತಲರ ಕೃತ್ಯ 24:25). ನಾವೂ ಸಹ ನಡುಗಬೇಕು: "ನಮ್ಮ ದೇವರು ದಹಿಸುವ ಅಗ್ನಿಯಾಗಿದ್ದಾನೆ" (ಇಬ್ರಿಯ 12:29), "ಜೀವವುಳ್ಳ ದೇವರ ಕೈಯಲ್ಲಿ ಸಿಕ್ಕಿ ಬೀಳುವುದು ಭಯಂಕರವಾದದ್ದು" (ಇಬ್ರಿಯ 10:31). ಹೀಗಿದ್ದರೂ ಫೇಲಿಕ್ಸನು ಕಾರ್ಯ ಕೈಕೊಳ್ಳಲಿಲ್ಲ. ಅವನು ಸುವಾರ್ತಾ ಸಂದೇ ಶಕ್ಕೆ ಉತ್ತರ ಕೊಡಲಿಲ್ಲ; ಆದರೆ ತನಗೆ "ಸಮಯ ಸಿಕ್ಕಾಗ ಪೌಲನನ್ನು ಪುನಃ ಕರೆಯಿಸು ವೆನೆಂದು" ಹೇಳಿದನು. ಕ್ರಿಸ್ತನನ್ನು ಸ್ವೀಕರಿಸಲು ಅವನು ಇನ್ನೊಂದು ಅವಕಾಶವನ್ನು ಎಂದಾದರರೂ ಕಂಡುಕೊಂಡನೋ ಎಂಬುದು ನನಗೆ ತಿಳಿದಿರುವದಿಲ್ಲ.

## ಮುಕ್ತಾಯ

ಸುವಾರ್ತೆಗಾಗಿ "ಸಮಯವನ್ನು ಕಂಡುಕೊಳ್ಳುವದಕ್ಕಾಗಿ" ನೀವು ಕಾದುಕೊಂಡಿರುವಿರೋ? ನಿಮಗೆ ಎಷ್ಟು ಸಮಯ ಉಳಿದಿರುವುದು? "ಈ ಅತ್ಯಂತ ವಿಶೇಷ ರಕ್ಷಣೆಯನ್ನು ನಾವು ಅಲಕ್ಷ್ಯಮಾಡಿದರೆ ತಪ್ಪಿಸಿಕೊಳ್ಳುವುದು ಹೇಗೆ?" (ಇಬ್ರಿಯ 2:3ಎ).

© 2009 Truth for Today